

## ಕಲರ್‌ಫುಲ್ ಅಮೂಲ್ಯ!

'ಅಮೂಲ್ಯ ಬಾಂಬ್ ಇದ್ದಂತೆ'. ಇದು ನಟ ಚಿರಂಜೀವಿ ಸರ್ಜಾ ಅವರ ಬಣ್ಣನೆ. 'ಈ ಕಿರಿಯ ನಟಿಯಿಂದ ಸಾಕಷ್ಟು ಕಲಿತೆ'– ಇದು ಬಣ್ಣನೆಯ ಜೊತೆಗಿನ ಬಾಲಂಗೋಚಿ.

'ರಾಮ್ ಲೀಲಾ' ಚಿತ್ರದಲ್ಲಿ ಅಮೂಲ್ಯ ಹಾಗೂ ಚಿರಂಜೀವಿ ಸರ್ಜಾ ಮೊದಲ ಬಾರಿಗೆ ಒಟ್ಟಿಗೆ ನಟಿಸಿದ್ದಾರೆ. ದೀಪಾವಳಿ ಸಂದರ್ಭದಲ್ಲಿ ತೆರೆಗೆ (ನ. 12) ಬರುತ್ತಿರುವ ಈ ಸಿನಿಮಾದ ಬಗ್ಗೆ ಇಬ್ಬರಿಗೂ ಅಪಾರ ನೆಚ್ಚುಗೆ. ಅಮೂಲ್ಯ ಅವರಿಗಂತೂ 'ರಾಮ್ ಲೀಲಾ' ತಮ್ಮ ವೃತ್ತಿ ಜೀವನದ ಲಕ್ಕಿ ಸಿನಿಮಾ ಅನ್ನಿಸಿದೆ. ಈ ಸಿನಿಮಾ ಒಪ್ಪಿಕೊಂಡ ಬೆನ್ನಿಗೇ ಎರಡು ಹೊಸ ಚಿತ್ರಗಳಲ್ಲಿ ಅವರಿಗೆ ಅವಕಾಶ ದೊರೆಯಿತಂತೆ. ಉಳಿದೆರಡು ಚಿತ್ರಗಳೂ ತೆರೆಗೆ ಸಿದ್ಧವಾಗಿರುವ ಸಂತಸ ಅವರದು. ಅಂದಹಾಗೆ, ಸೌಂದರ್ಯ ಜಗದೀಶ್ ನಿರ್ಮಾಣ ಹಾಗೂ ವಿಜಯ್ ಕಿರಣ್ ಚೊಚ್ಚಿಲ ನಿರ್ದೇಶನದ ಈ ಚಿತ್ರ ತೆಲುಗಿನ 'ಲೌಕ್ಯಂ'ನ ಕನ್ನಡ ರೂಪ. 'ಇದೊಂದು ಕೌಟುಂಬಿಕ ಮನರಂಜನಾತ್ಮಕ ಸಿನಿಮಾ' ಎನ್ನುವುದು ನಿರ್ಮಾಪಕ – ನಿರ್ದೇಶಕರ ವಿಶ್ಲೇಷಣೆ.

ಚಿಕ್ಕಣ್ಣ, ರವಿಶಂಕರ್, ಸಾಧು ಕೋಕಿಲ ಹಾಗೂ ರಂಗಾಯಣ ರಘು 'ರಾಮ್ ಲೀಲಾ'ದ ಮುಖ್ಯ ಪಾತ್ರಗಳಲ್ಲಿದ್ದಾರೆ. ಗ್ಲಾಮರ್ ಗೊಂಬೆ ಸಂಜನಾ ಕೂಡ ಮುಖ್ಯಪಾತ್ರವೊಂದರಲ್ಲಿ ನಟಿಸಿದ್ದು, 'ಕಲರ್‌ಫುಲ್ ಚಿತ್ರವೊಂದರ ಭಾಗ'ವಾಗಿರುವ ಸಂತಸ ಅವರದು.

## ವರ್ಮ–ಶಿವಣ್ಣ ಯುಗಳ!

ವೀರಪ್ಪನ್ ಬಗ್ಗೆ ಮುದ್ರಣ ಹಾಗೂ ದೃಶ್ಯ ಮಾಧ್ಯಮಗಳು ಈಗಾಗಲೇ ಸಾಕಷ್ಟು ಚರ್ಚಿಸಿವೆ. ಆತನ ಬಗ್ಗೆ ಹೊಸತಾಗಿ ಹೇಳುವಂತಹದ್ದು ಏನಿದೇ? ಇದು, 'ಕಿಲ್ಲಿಂಗ್ ವೀರಪ್ಪನ್' ಸಿನಿಮಾದ ಪ್ರಸ್ತಾಪ ಹೊತ್ತು ತಮ್ಮನ್ನು ಎಡತಾಕಿದ ನಿರ್ದೇಶಕ ರಾಮ್‌ಗೋಪಾಲ್ ವರ್ಮ ಅವರನ್ನು ಶಿವರಾಜಕುಮಾರ್ ಕೇಳಿದ ಪ್ರಶ್ನೆ. ಇದಕ್ಕೆ ವರ್ಮ ನೀಡಿದ ಉತ್ತರ, 'ಹೌದು, ಹೇಳಬೇಕಾದ ವಿಷಯಗಳು ನನ್ನ ಬಳಿ ಸಾಕಷ್ಟಿವೆ'.

ಪ್ರಸ್ತುತ ತೆರೆಗೆ ಸಿದ್ಧವಾಗಿರುವ 'ಕಿಲ್ಲಿಂಗ್ ವೀರಪ್ಪನ್' ಸಿನಿಮಾ ಶಿವರಾಜ್‌ಗೆ ಒಂದು ಬೆರಗಿನಂತೆ ಹಾಗೂ ವಿಶಿಷ್ಟ ಅನುಭವದಂತೆ ಕಾಣಿಸಿದಂತೆ. ವೀರಪ್ಪನ್‌ಗಿಂತಲೂ ಆತನ ವಿರುದ್ಧ ನಡೆದ ಕಾರ್ಯಾಚರಣೆಗೆ ಒತ್ತು ನೀಡಿರುವ ಸಿನಿಮಾ ಶಿವಣ್ಣನಿಗೆ ದೃಶ್ಯ ಮಾಧ್ಯಮದ ಅಪಾರ ಸಾಧ್ಯತೆಗಳಂತೆ ಭಾಸವಾಗಿದೆ. ಶಿವಣ್ಣನ ಮಾತಿರಲಿ, ಸ್ವತಃ ವರ್ಮ ಅವರಿಗೆ 'ಈ ಸಿನಿಮಾ ತಮ್ಮ ವೃತ್ತಿ ಜೀವನದಲ್ಲೇ ವಿಭಿನ್ನ' ಎನ್ನಿಸಿದೆ. ಈ ಉತ್ಸಾಹದಲ್ಲೇ ಅವರು ಮತ್ತೊಂದು ಕನ್ನಡ ಚಿತ್ರ ರೂಪಿಸುವ ಉದ್ದೇಶದಲ್ಲಿದ್ದಾರೆ.

'ಕಿಲ್ಲಿಂಗ್ ವೀರಪ್ಪನ್' ಚಿತ್ರದ ಗೀತೆಗಳ ಧ್ವನಿಮುದ್ರಿಕೆ ಕಳೆದ ವಾರ ಪೇಟೆಗೆ ಬಂದಿದೆ. ನವೆಂಬರ್‌ನಲ್ಲೇ ಚಿತ್ರವನ್ನು ತೆರೆಕಾಣಿಸುವ ಪ್ರಯತ್ನ ಚಿತ್ರತಂಡದ್ದು. ಸಂದೀಪ್ ಭಾರದ್ವಾಜ್, ಪಾರುಲ್ ಯಾದವ್, ಯಜ್ಞಾ ಶೆಟ್ಟಿ, ಸಂಚಾರಿ ವಿಜಯ್, ರಾಕ್‌ಲೈನ್ ವೆಂಕಟೇಶ್, ರಾಜೇಶ್ ಹಾಗೂ ಗಡ್ಡ ವಿಜಿ ತಾರಾಗಣದಲ್ಲಿರುವ ಪ್ರಮುಖರು. ಕನ್ನಡ ಮಾತ್ರವಲ್ಲದೆ ತೆಲುಗು, ತಮಿಳು ಹಾಗೂ ಹಿಂದಿಯಲ್ಲೂ 'ಕಿಲ್ಲಿಂಗ್ ವೀರಪ್ಪನ್' ಚಿತ್ರವನ್ನು ತೆರೆ ಕಾಣಿಸುವ ಪ್ರಯತ್ನಗಳು ನಡೆದಿವೆ.

■ ರಘು

